**ವಿಷಯ:-** ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನ ಅಮರಮುಡ್ನೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಕೈಗೊಂಡ ರಸ್ತೆ ದುರಸ್ತಿ ಕಾಮಗಾರಿಯಲ್ಲಿ ಕರ್ತವ್ಯಲೋಪ ಎಸಗಿರುವ ನೌಕರರ ವಿರುದ್ಧ ಶಿಸ್ತು ಕ್ರಮ - ಅಂತಿಮ ದಂಡನಾದೇಶ.

**ಓದಲಾಗಿದೆ:-**
1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 23 ಇಎನ್‌ಕ್ಯೂ 20115, ದಿನಾಂಕ: 10.03.2015
2. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು, ಇವರ ಪತ್ರ ಸಂಖ್ಯೆ:ಉಪಲೋಕ್-2/ಡಿಇ/155/2015//ಎಆರ್‌ಇ-8 ದಿನಾಂಕ:01.08.2019
3. ಮಾನ್ಯ ಉಪಲೋಕಾಯುಕ್ತ ರವರ ಶಿಫಾರಸ್ಸು ಪತ್ರ ಸಂಖ್ಯೆ:ಉಪಲೋಕ್-2/ಡಿಇ/155/2015/ಎಆರ್‌ಇ-8, ದಿನಾಂಕ:31.07.2019
4. ಸರ್ಕಾರದ ಕಾರಣ ಕೇಳುವ ನೋಟಿಸ್ ದಿನಾಂಕ:20.08.2019
5. ಶ್ರೀ ಚನ್ನಪ್ಪ ಮೊಯ್ಲಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರು ಸಲ್ಲಿಸಿರುವ ಲಿಖಿತ ಹೇಳಿಕೆ ದಿನಾಂಕ:21.09.2019

*****

**ಪ್ರಸ್ತಾವನೆ:**

ಕರ್ನಾಟಕ ಲೋಕಾಯುಕ್ತ ಕಚೇರಿಯಲ್ಲಿ ಶ್ರೀ ಅಶೋಕ ಚೂಂತಾರು ಬಿನ್ ಕೂಸಪ್ಪಗೌಡ ಚೂಂತಾರು, ಅಮರಮುಡ್ನೂರು ಗ್ರಾಮ, ಸುಳ್ಯ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ಇವರು ಸಲ್ಲಿಸಿದ ದೂರಿನ ಬಗ್ಗೆ ತನಿಖೆ ಕೈಗೊಂಡಿದ್ದು. ತನಿಖಾ ವರದಿಯಲ್ಲಿ ಶ್ರೀ ಸಂಗಪ್ಪ ಹುಕ್ಕೇರಿ, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಸುಳ್ಯ ಇವರು ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನ ಅಮರಮುಡ್ನೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಅಜ್ಜನಗದ್ದೆಯಿಂದ ಅದ್ರಕಾಯಾದ ವರೆಗಿನ ರಸ್ತೆ ದುರಸ್ತಿ ಕಾಮಗಾರಿಯ ಅಂದಾಜು ಪಟ್ಟಿಯನ್ನು ತಯಾರಿಸದೇ ಗುತ್ತಿಗೆದಾರರಾದ ಶ್ರೀ ಗೋಪಾಲಕೃಷ್ಣ ರವರ ಮೂಲಕ ಬೌಲ್ಡರಗಳನ್ನು ಹಾಕಿ ರಿಪೇರಿ ಮಾಡಿಸಿ, ಅವರಿಗೆ ಗ್ರಾಮ ಪಂಚಾಯತಿಯಿಂದ 50,000/ ರೂ.ಗಳನ್ನು ಸಂದಾಯ ಮಾಡುವ ಮೂಲಕ ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬಂದ ಹಿನ್ನಲೆಯಲ್ಲಿ ಸದರಿಯವರ ವಿರುದ್ಧದ ಆರೋಪಗಳ ಕುರಿತು ವಿವರವಾದ ಇಲಾಖಾ ವಿಚಾರಣೆಯನ್ನು ನಡೆಸಲು ಪ್ರಕರಣವನ್ನು ತಮಗೆ ವಹಿಸುವಂತೆ ಮಾನ್ಯ ಉಪಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3) ರನ್ವಯ ಸರ್ಕಾರಕ್ಕೆ ವರದಿಯನ್ನು ದಿನಾಂಕ:05.02.2015ರಂದು ಸಲ್ಲಿಸಿದ್ದರು. ಸರ್ಕಾರವು ಸದರಿ ವರದಿಯನ್ನು ಪರಿಶೀಲಿಸಿ, ಶ್ರೀ ಸಂಗಪ್ಪ ಹುಕ್ಕೇರಿ, ಕಿರಿಯ ಇಂಜಿನಿಯರ ರವರು ಸುಳ್ಯ ತಾಲ್ಲೂಕಿನ ಅಮರಮುಡ್ನೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಅಜ್ಜನಗದ್ದೆಯಿಂದ ಅದ್ರಕಾಯಾದ ವರೆಗಿನ ರಸ್ತೆ ದುರಸ್ತಿ ಕಾಮಗಾರಿಗೆ ಸಂಬಂಧಿಸಿದಂತೆ ಅಂದಾಜು ಪಟ್ಟಿಯನ್ನು ತಯಾರಿಸದೇ ಕಾಮಗಾರಿಯನ್ನು ನಿರ್ವಹಿಸಿ ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬಂದ ಹಿನ್ನಲೆಯಲ್ಲಿ ಸದರಿಯವರುಗಳ ವಿರುದ್ಧದ ಆರೋಪಗಳ ಕುರಿತು ವಿವರವಾದ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಗಳು-1957ರ ನಿಯಮ 11 ರಡಿ ನಡೆಸುವ ಸಲುವಾಗಿ ಪ್ರಕರಣವನ್ನು ಸದರಿ ನಿಯಮಗಳ ನಿಯಮ 14ಎ ರಡಿ ಮಾನ್ಯ ಉಪಲೋಕಾಯುಕ್ತರಿಗೆ ಮೇಲೆ ಓದಲಾದ ಕ್ರಮಾಂಕ(1)ರ ಆದೇಶದಲ್ಲಿ ವಹಿಸಲಾಗಿತ್ತು.

ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಮೇಲೆ ಓದಲಾದ ಕ್ರಮಾಂಕ (2)ರ ದಿನಾಂಕ:01.08.2019 ರ ಪತ್ರದೊಂದಿಗೆ ವಿಚಾರಣಾ ವರದಿ, ವಿಚಾರಣಾ ವರದಿ ಕುರಿತಾಗಿ ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸು ಇತರೆ ದಾಖಲೆಗಳನ್ನು ಲಗತ್ತಿಸಿ, ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಸರ್ಕಾರವು ವಿಚಾರಣಾ ವರದಿ ಹಾಗೂ ಇತರೆ ದಾಖಲೆಗಳನ್ನು ಪರಿಶೀಲಿಸಿರುತ್ತದೆ. ವಿಚಾರಣಾಧಿಕಾರಿಗಳು ಆಪಾದಿತರುಗಳ ವಿರುದ್ದದ ಆರೋಪಗಳ ಕುರಿತು ಶಿಸ್ತು ಪ್ರಾಧಿಕಾರದ ಪರವಾಗಿ ಮೂರು ಸಾಕ್ಷಿ ಹಾಗೂ ಹಲವಾರು ದಾಖಲೆಗಳು ಹಾಗೂ ಆಪಾದಿತರ ಪರವಾಗಿ 1 ಸಾಕ್ಷಿಯನ್ನು ಪರಿಶೀಲಿಸಿ ಅಂತಿಮವಾಗಿ ಸಲ್ಲಿಸಿರುವ ವರದಿಯಲ್ಲಿ ಶ್ರೀ ಸಂಗಪ್ಪ ಹುಕ್ಕೇರಿ, ಅಂದಿನ ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಸುಳ್ಯ ಇವರ ವಿರುದ್ಧದ ಆರೋಪ ಸಾಭೀತಾಗಿರುತ್ತದೆಂದು ನಿರ್ಣಯಿಸಿ ವರದಿಯನ್ನು ಸಲ್ಲಿಸಿರುತ್ತಾರೆ. ಮಾನ್ಯ ಉಪಲೋಕಾಯುಕ್ತರವರು ವಿಚಾರಣಾಧಿಕಾರಿಗಳು ಸಾಕ್ಷ್ಯ ಹಾಗೂ ದಾಖಲೆಗಳನ್ನು ಪರಿಗಣಿಸಿ ನಿರ್ಣಯಿಸಿರುವುದರಿಂದ ಸಾಭೀತಾದ ಆರೋಪಗಳಿಗೆ ಅನುಗುಣವಾಗಿ ದಂಡನೆ ವಿಧಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ವಿಚಾರಣಾ ವರದಿಯನ್ನು ಆಧರಿಸಿ ಮುಂದಿನ ಕ್ರಮ ಕೈಗೊಳ್ಳುವ ಪೂರ್ವದಲ್ಲಿ ಸದರಿ ಪ್ರಕರಣದಲ್ಲಿ ಭಾಗಿಯಾಗಿರುವ ಶ್ರೀ ಸಂಗಪ್ಪ ಹುಕ್ಕೇರಿ, ಅಂದಿನ ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಸುಳ್ಯ ಇವರಿಗೆ ಮೇಲೆ ಓದಲಾದ ಕ್ರಮಾಂಕ (4) ರ ದಿನಾಂಕ: 20.08.2019ರ 2 ನೇ ಕಾರಣ ಕೇಳುವ ನೋಟಿಸ್‌ನೊಂದಿಗೆ ವಿಚಾರಣಾ ವರದಿ ಹಾಗೂ ಮಾನ್ಯ ಉಪ ಲೋಕಾಯುಕ್ತರವರ ಶಿಫಾರಸ್ಸು ಪತ್ರಗಳನ್ನು ಲಗತ್ತಿಸಿ ಜಾರಿ ಮಾಡಲಾಗಿತ್ತು. ಪ್ರತಿಯಾಗಿ ಸದರಿಯವರು ಮೇಲೆ ಓದಲಾದ ಕ್ರಮಾಂಕ (5) ರ ದಿನಾಂಕ: 20.09.2019 ತಮ್ಮ ಲಿಖಿತ ಸಮಜಾಯಿಸಿಯನ್ನು ಸಲ್ಲಿಸಿರುತ್ತಾರೆ.

ಸರ್ಕಾರವು ಪ್ರಕರಣಕ್ಕೆ ಸಂಬಂಧಿಸಿದಂತೆ ಲಭ್ಯವಿರುವ ವಿಚಾರಣಾ ವರದಿ, ಸಾಕ್ಷಿಗಳ ಹೇಳಿಕೆಗಳು ಹಾಗೂ ಆಪಾದಿತ ನೌಕರರು ಸಲ್ಲಿಸಿರುವ ಲಿಖಿತ ಹೇಳಿಕೆ ಹಾಗೂ ದಾಖಲೆಗಳನ್ನು ಪರಿಶೀಲಿಸಿರುತ್ತದೆ. ಆಪಾದಿತ ನೌಕರರಾದ ಶ್ರೀ ಸಂಗಪ್ಪ ಹುಕ್ಕೇರಿ, ಅಂದಿನ ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಸುಳ್ಯ ಇವರ ವಿರುದ್ಧದ ಆರೋಪವೆಂದರೆ ಸುಳ್ಯ ತಾಲ್ಲೂಕಿನ ಅಮರಮುಡ್ನೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಅಜ್ಜನಗದ್ದೆಯಿಂದ ಅದ್ರಕಾಯಾದ ವರೆಗೆ ರಸ್ತೆ ಕಾಮಗಾರಿಯ ಅಂದಾಜು ಪಟ್ಟಿಯನ್ನು ತಯಾರಿಸದೇ ಸಂಬಂಧಿಸಿದ ಪ್ರಾಧಿಕಾರದಿಂದ ಕಾಮಗಾರಿಯನ್ನು ಕೈಗೊಳ್ಳಲು ಅನುಮೋದನೆ ಪಡೆಯದೇ ಶ್ರೀ ಗೋಪಾಲಕೃಷ್ಣ, ಗುತ್ತಿಗೆದಾರರ ಮೂಲಕ ಬೌಲ್ಡರ್‌ಗಳನ್ನು ಹಾಕಿ ದುರಸ್ತಿ ಮಾಡಿ ಗ್ರಾಮ ಪಂಚಾಯತಿಯಿಂದ 50,000/- ರೂ.ಗಳ ಹಣ ಬಿಡುಗಡೆ ಮಾಡಿ ದುರ್ನಡತೆ ಎಸಗಿರುವುದು ಹಾಗೂ ಚಾಮಡಕ ಕಂಜರಪಾನೆ ರಸ್ತೆಯಲ್ಲಿ ಅಡ್ಡಲಾಗಿ ಕಾಲುವೆ ನಿರ್ಮಾಣ ಕಾಮಗಾರಿಯ ಅಳತೆ ಪುಸ್ತಕದಲ್ಲಿ ಅಳತೆಗಳನ್ನು ಹಾಗೂ ಅದೇ ಪಂಚಾಯತಿ ವ್ಯಾಪ್ತಿಯ ಬೈಲಾರು ಗ್ರಾಮದಲ್ಲಿ ಪ್ರಯಾಣಿಕರ ತಂಗುದಾಣ ನಿರ್ಮಾಣ ಕಾಮಗಾರಿಯ ಅಳತೆಗಳನ್ನು ಆಪಾದಿತ ನೌಕರರು ತಮ್ಮ ಹಸ್ತಾಕ್ಷರದ ಬದಲಿಗೆ ಬೇರೊಬ್ಬರ ಹಸ್ತಾಕ್ಷರವನ್ನು ದಾಖಲಿಸುವ ಮೂಲಕ ಇಲಾಖೆಯ ಸಂಹಿತೆಯ ನಿರ್ದೇಶನಗಳನ್ನು ಉಲ್ಲಂಘಿಸಿರುವ ಬಗ್ಗೆ ತಿಳಿಸಲಾಗಿದೆ.

ಸರ್ಕಾರವು ವಿಚಾರಣಾ ವರದಿಗೆ ಪ್ರತಿಯಾಗಿ ಆಪಾದಿತರಾದ ಶ್ರೀ ಸಂಗಪ್ಪ ಹುಕ್ಕೇರಿ, ಅಂದಿನ ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಸುಳ್ಯ ಇವರು

ಸಲ್ಲಿಸಿರುವ ಲಿಖಿತ ಹೇಳಿಕೆಗಳನ್ನು ಪರಿಶೀಲಿಸಿದೆ. ಸದರಿ ಹೇಳಿಕೆಯಲ್ಲಿ ಕಾಮಗಾರಿಗೆ 50,000/- ರೂ:ಗಳ ಹಣ ಪಾವತಿಸಿದ ಸಂದರ್ಭದಲ್ಲಿ ತಾವು ತಮ್ಮ ವಿವಾಹ ನಿಮಿತ್ತ ರಜೆಯಲ್ಲಿದ್ದು. ನಂತರ ಸದರಿ ಕಾಮಗಾರಿಗೆ ಅಂದಾಜು ಪತ್ರಿಕೆಯನ್ನು ಗ್ರಾಮ ಪಂಚಾಯತಿ ಸಭೆಯಲ್ಲಿ ಇರಿಸಿ, ದಿನಾಂಕ:06.07.2007ರಂದು ಠರಾವು ಮಾಡಿಸಿ, ನಂತರ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಸಹಾಯಕ ಕಾರ್ಯಪಾಲಕ ಇಂಜಿನಿಯರ ರವರುಗಳಿಂದ ತಾಂತ್ರಿಕ/ಆಡಳತಾತ್ಮಕ ಅನುಮೋದನೆಯನ್ನು ಪಡೆಯಲಾಗಿರುತ್ತದೆಂದು, ಕಾಮಗಾರಿಯ ಅಳತೆ ಪುಸ್ತಕದಲ್ಲಿ ಅಳತೆಗಳನ್ನು ತಮ್ಮ ಹಸ್ತಾಕ್ಷರದಲ್ಲೇ ಬರೆಯದೇ ಇರುವುದಕ್ಕೆ ಸಂಬಂಧಿಸಿದಂತೆ ತಮಗೆ ಕೈ ಬೆರಳಲಿನ Psowasis Arthritis ತೊಂದರೆ ಇದ್ದ ಕಾರಣ ಬೆರಳುಗಳು ಊತಗೊಂಡಿದ್ದು, ಬರೆಯಲು ಸಾಧ್ಯವಾಗದ ಕಾರಣ ಬೇರೆ ತಾಂತ್ರಿಕ ಸಹಾಯಕರ ಸಹಾಯವನ್ನು ಪಡೆದು ಅಳತೆ ಪುಸ್ತಕದಲ್ಲಿ ವಿವರಗಳನ್ನು ದಾಖಲಿಸಲು ಕಾರ್ಯಪಾಲಕ ಇಂಜಿನಿಯರ ರವರಿಂದ ಅನುಮತಿ ಪಡೆದಿದ್ದು. ಸದರಿ ಪ್ರಕರಣದಲ್ಲಿ ಯಾವುದೇ ರೀತಿಯ ಕರ್ತವ್ಯಲೋಪ ಎಸಗದೇ ಇರುವುದರಿಂದ ತಮ್ಮನ್ನು ಆರೋಪದಿಂದ ಮುಕ್ತಗೊಳಿಸಬೇಕೆಂದು ಕೋರಿರುತ್ತಾರೆ.

ಸರ್ಕಾರವು ಆರೋಪಿತರ ವಿವರಣೆಯನ್ನು ಪರಿಗಣಿಸಿರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನ ಅಮರಮುಡ್ನೂರು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಅಜ್ಜನಗದ್ದೆಯಿಂದ ಅದ್ರಕಾಯಾದ ವರೆಗಿನ ರಸ್ತೆ ದುರಸ್ತಿ ಕಾಮಗಾರಿ ನಿರ್ವಹಿಸುವ ಸಮಯದಲ್ಲಿ ಆಪಾದಿತರಾದ ಶ್ರೀ ಸಂಗಪ್ಪ ಹುಕ್ಕೇರಿ, ಕಿರಿಯ ಇಂಜಿನಿಯರ ರವರು ತಮ್ಮ ವಿವಾಹ ಪ್ರಯುಕ್ತ ದಿನಾಂಕ:07.06.2007ರಿಂದ 25.07.2007ರ ವರೆಗೆ ರಜೆ ಮೇಲೆ ತೆರಳಿರುತ್ತಾರೆ. ಸದರಿಯವರು ರಜೆಯ ಮೇಲಿದ್ದ ಅವಧಿಯಲ್ಲಿ ದಿನಾಂಕ:08.06.2007ರಂದು ಅಮರಮುಡ್ನೂರು ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ ಕೈಗೊಂಡು 50,000/-ರೂ.ಗಳನ್ನು ಪಾವತಿಸಿ ನಂತರದಲ್ಲಿ ಘಟನೋತ್ತರ ಅನುಮೋದನೆ ಪಡೆದಿರುವುದು ಸ್ಪಷ್ಟವಿರುತ್ತದೆ. ಹಾಗಾಗಿ ಸದರಿ ಆರೋಪಕ್ಕೆ ನೇರವಾಗಿ ಶ್ರೀ ಸಂಗಪ್ಪ ಹುಕ್ಕೇರಿ, ಕಿರಿಯ ಇಂಜಿನಿಯ ರವರು ಕಾರಣರಾಗಿವುದು ಕಂಡು ಬರುವುದಿಲ್ಲ.

ಉಳಿದಂತೆ ಚಾಮಡಕ ಕಂಜರಪಾನೆ ರಸ್ತೆಯಲ್ಲಿ ಅಡ್ಡಲಾಗಿ ಕಾಲುವೆ ನಿರ್ಮಾಣ ಕಾಮಗಾರಿಯ ಅಳತೆ ಪುಸ್ತಕದಲ್ಲಿ ಅಳತೆಗಳನ್ನು ಹಾಗೂ ಅದೇ ಪಂಚಾಯತಿ ವ್ಯಾಪ್ತಿಯ ಬೈಲಾರು ಗ್ರಾಮದಲ್ಲಿ ಪ್ರಯಾಣಿಕರ ತಂಗುದಾಣ ನಿರ್ಮಾಣ ಕಾಮಗಾರಿಯ ಅಳತೆಗಳನ್ನು ಆಪಾದಿತ ನೌಕರರು ತಮ್ಮ ಹಸ್ತಾಕ್ಷರದಲ್ಲಿ ದಾಖಲಿಸದೇ ಬದಲಿಗೆ ಬೇರೊಬ್ಬರ ಮೂಲಕ ದಾಖಲಿಸಿದ್ದು, ಇದಕ್ಕೆ ಅವರು ಕಾರಣಗಳನ್ನು ನೀಡಿದ್ದರೂ ಸಹ ಸದರಿ ಕಾರಣಗಳು ಸಂದೇಹಕ್ಕೆ ಅವಕಾಶ ನೀಡುವಂತಿವೆ. ಹಾಗಾಗಿ ಕಾಮಗಾರಿಯ ಅಳತೆಗಳನ್ನು ಬೇರೊಬ್ಬರ ತಾಂತ್ರಿಕ ಸಹಾಯಕರಿಂದ ದಾಖಲಿಸಿರುವುದು ರುಜುವಾತವಾಗಿರುತ್ತದೆ. ಹಾಗಾಗಿ ಸದರಿಯವರು ಇಲಾಖೆಯ ಸಂಹಿತೆಯ ನಿರ್ದೇಶನಗಳನ್ನು ಉಲ್ಲಂಘಿಸಿರುವುದು ಮಾತ್ರ ಸಾಬೀತಾಗಿರುತ್ತದೆ. ಅದರಲ್ಲಿ ಯಾವುದೇ ಆರ್ಥಿಕ ನಷ್ಟ ಉಂಟಾಗಿರುವುದಿಲ್ಲ. ಅಲ್ಲದೇ ಕಾಮಗಾರಿಯ ಅನುಷ್ಠಾನದಲ್ಲಿ ಅಕ್ರಮ ಎಸಗಿರುವುದು ಅಥವಾ ಗಂಭೀರ ಸ್ವರೂಪದ ದುರ್ನಡತೆ ಎಸಗಿರುವಂತಹ ಆರೋಪಗಳು ಇರುವುದಿಲ್ಲ. ಆದ್ದರಿಂದ ಸರ್ಕಾರವು ಸಾಬೀತಾದ ಆರೋಪಗಳ ಗಂಭೀರತೆಗನುಗುಣವಾಗಿ ದಂಡನೆಯನ್ನು ವಿಧಿಸಲು ತೀರ್ಮಾನಿಸಿದೆ. ಆದ್ದರಿಂದ ಈ ಕೆಳಕಂಡ ಆದೇಶ:

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 57 ಇಎನ್‌ಕ್ಯೂ 2019 ಬೆಂಗಳೂರು ದಿನಾಂಕ:27.04.2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರವು ಶ್ರೀ ಸಂಗಪ್ಪ ಹುಕ್ಕೇರಿ, ಅಂದಿನ ಕಿರಿಯ ಇಂಜಿನಿಯರ್, ಪಂಚಾಯತ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಸುಳ್ಯ ಇವರ ಕರ್ತವ್ಯಲೋಪದ ಗಂಭೀರತೆಗೆ ಅನುಗುಣವಾಗಿ ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ ನಿಯಂತ್ರಣ

ಮತ್ತು ಮೇಲ್ಮನವಿ) 1957ರ ನಿಯಮಗಳ ನಿಯಮ8 (iii) ರನ್ವಯ ಕಾಲಿಕ ವೇತನ ಶ್ರೇಣಿಯಲ್ಲಿ ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮವಾಗಿ ತಡೆಹಿಡಿಯುವ ದಂಡನೆ ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

27/04/202

(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ (ಸೇ-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು (ಲೆಕ್ಕ ಪತ್ರ 1 & 2) / (ಆಡಿಟ್)
2. ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ದಕ್ಷಿಣ ಕನ್ನಡ
4. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಚೇರಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು
5. ಅಪರ ನಿಬಂಧಕರು ವಿಚಾರಣೆಗಳ -8, ಕರ್ನಾಟಕ ಲೋಕಾಯುಕ್ತ ಕಚೇರಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು
6. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿ ಭವನ, ಆನಂದರಾವ್ ಸರ್ಕಲ್, ಬೆಂಗಳೂರು.
7. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಕೆ.ಆರ್.ಸರ್ಕಲ್, ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, (ಸೇವೆಗಳು-ಎ&ಸಿ) ವಿಕಾಸಸೌಧ ಬೆಂಗಳೂರು.
9. ಸಂಬಂಧಪಟ್ಟ ಅಧಿಕಾರಿಗಳಿಗೆ
10. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ / ಉಪ ಕಾರ್ಯದರ್ಶಿ (ಆಡಳಿತ) ಇವರುಗಳ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರಿಗೆ.
11. ಮೇಲ್ವಿಚಾರಕರು, ಗಣಕಯಂತ್ರ ವಿಭಾಗ, ಗ್ರಾ.ಅ.ಪಂ.ರಾಜ್ ಇಲಾಖೆ ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಲುವಾಗಿ.
12. ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.